ಸಾಗರದಲ್ಲಿ ಅನಧಿಕೃತ ಕಟ್ಟಡಗಳ ವಿಚಾರ

೨೯೧ (೮೮೫) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

(ಅ) ಶಿವಮೊಗ್ಗ ಜಿಲ್ಲೆ ಸಾಗರದಲ್ಲಿ ಅನಧಿಕೃತ ಕಟ್ಟಡಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ, ಹಾಗೂ ಈ ಕಟ್ಟಡಗಳ ಸಂಖ್ಯೆ ಎಷ್ಟು ಮತ್ತು ಎಷ್ಟು ವರ್ಷಗಳ ಹಿಂದೆ ಕಟ್ಟಲ್ಪಟ್ಟಿವೆ ?

(ಆ) ಹಾಗಿದ್ದಲ್ಲಿ ಈ ರೀತಿ ಇರುವ ಮನೆಗಳನ್ನು ಕ್ರಮಗೊಳಿಸಲು ಪುರಸಭೆ ಸರಕಾರಕ್ಕೆ ಪ್ರಸ್ತಾಪ ಕಳಿಸಿತ್ತೆ. ಎಷ್ಟು ಮನೆಗಳ ಬಗ್ಗೆ ಪುರಸಭೆ ಶಿಫಾರಸ್ ಮಾಡಿದ ಬಳಿ ಎಷ್ಟು ಹಾಗೂ ಸರಕಾರದವರು ನಿಗದಿಗೊಳಿಸಿದ ಬೆಲೆ ಏನು ?

(ಇ) ಈ ರೀತಿಯ ಅನೇಕ ಮನೆಗಳು ಪುರಸಭೆಯ ಸರಹದ್ದು ವಿಸ್ತರಣೆಗೆ ಮುಂಚೆಯೇ ಕಟ್ಟಲ್ಪಟ್ಟವು ಎಂಬುದು ಮತ್ತು ಈಗ ಸರಕಾರವು ನಿಗದಿಗೊಳಿಸಿದ ಬೆಲೆ ಅಲ್ಲಿರುವ ಕಟ್ಟಡಗಳ ಬೆಲೆಗಿಂತಲೂ ಹೆಚ್ಚಿವೆ ಎಂಬುದು ಸರಕಾರಕ್ಕೆ ವರದಿಯಾಗಿದೆಯೆ, ಹಾಗಿದ್ದಲ್ಲಿ ಆ ಬಗ್ಗೆ ಕೈಕೊಂಡ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು).—

(ಅ) ಬಂದಿದೆ. ಸುಮಾರು ೧೧೦೦ ಕಟ್ಟಡಗಳು ೩೦ ವರ್ಷಗಳಿಂದಲೂ ಇವೆ.

(ಆ) ೫೭೮ ಮನೆಗಳ ಬಗ್ಗೆ ಪುರಸಭೆ ಪ್ರಸ್ತಾಪ ಕಳುಹಿಸಿತ್ತು. ಪುರಸಭೆ ಶಿಫಾರಸ್ಸು ಮಾಡಿದ್ದ ಬೆಲೆ : ಚದರ ಗಜಕ್ಕೆ ರೂ. ೦-೨೫, ರೂ. ೦-೪೦, ರೂ. ೦-೫೦, ರೂ. ೧-೦೦ ಮತ್ತು ೧-೫೦.

ಸರ್ಕಾರವು ನಿಗದಿಪಡಿಸಿದ ಬೆಲೆ :

(೧) ೧೨೦೦ ಚ.ಅಡಿವರೆಗೆ ಚ.ಗಜಕ್ಕೆ ರೂ. ೨.೫೦

(೨) ೧೨೦೧ ಚ.ಅಡಿಯಿಂದ ೨೪೦೦ ಚ.ಅಡಿ ವರೆಗೆ ಚ.ಗಜಕ್ಕೆ ರೂ. ೫.೦೦ ರಂತೆ

(೩) ೨೪೦೧ ಚ.ಅಡಿಗಿಂತ ಹೆಚ್ಚಿಗೆ ಚ.ಗಜಕ್ಕೆ ರೂ: ೧೦.೦೦

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನರಿಗೆ ಈ ದರದಲ್ಲಿ (೧) ಮತ್ತು (೨)ನೇ ವರ್ಗದಲ್ಲಿನ ಬೆಲೆಗೆ ಒಂದು ರೂ. ಕಡಿಮೆ. ನಿವೇಶನದ ಬೆಲೆಯನ್ನು ಮೂರು ವಾರ್ಷಿಕ ಕಂತುಗಳಲ್ಲಿ ಕಟ್ಟಬಹುದು.

(ಇ) ಹಲವು ಮನೆಗಳು ಸರಹದ್ದು ವಿಸ್ತರಣೆಗೆ ಮೊದಲು ಬುದಿದ್ದವು. ಬೆಲೆಗೆ ಬಗ್ಗೆ ಹಲವು ಆಕ್ಷೇಪಣಾ ಅರ್ಜಿಗಳು ಪುರಸಭೆಗೆ ಬಂದಿದ್ದು ಅದನ್ನು ಪರಿಶೀಲಿಸಲಾಗುತ್ತಿರುವುದಾಗಿ ವರದಿಯಾಗಿದೆ.

ರಾಜ್ಯದಲ್ಲಿ ಬಟ್ಟೆ ಉತ್ಪಾದನೆಯ ನೇಕಾರ ಸಹಕಾರಿ ಸಂಘಗಳಿಗೆ ರಿಯಾಯಿತಿ ನೀಡಿರುವುದು

೨೯೨. (೮೫೨) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗಂಳೇದಗುಡ್ಡ). —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಹಕಾರ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಬಟ್ಟೆ ಉತ್ಪಾದನೆಯ ನೇಕಾರ ಸಹಕಾರಿ ಸಂಘಗಳಿಗೆ ರಿಯಾಯಿತಿ ಕೊಡಲಾಗುತ್ತಿದೆಯೆ?

(ಆ) ಹಾಗಿದ್ದಲ್ಲಿ ೧೯೮೦–೮೧, ೮೧–೮೨ ಹಾಗೂ ೮೨–೮೩ನೇ ಸಾಲಿಗೆ ಜಿಲ್ಲಾವಾರಾಗಿ ಕೊಟ್ಟ ರಿಯಾಯಿತಿಯ ಮೊತ್ತವೆಷ್ಟು ?

(ಇ) ಈ ಸದರಿ ರಿಯಾಯಿತಿ ಯೋಜನೆಯನ್ನು ಕೈಬಿಡಲು ಸರ್ಕಾರದವರು ಉದ್ದೇಶಿಸಿರುವರೆ?

(ಈ) ಹಾಗಿದ್ದಲ್ಲಿ ನೇಕಾರ ಸಹಕಾರಿ ಸಂಘಗಳಿಗೆ ಉತ್ತೇಜನ ಕೊಡಲು ಸರ್ಕಾರದವರು ಯಾವ ಯೋಜನೆಯನ್ನು ಸಿದ್ಧಪಡಿಸಿದ್ದಾರೆಯೆ?

(ಉ) ಹಾಗಿದ್ದಲ್ಲಿ ಅದರ ರೂಪರೇಷೆಗಳೇನು ?

ಶ್ರೀ ಆರ್. ಎಲ್. ಜಾಲಪ್ಪ. (ಮಾನ್ಯ ಸಹಕಾರ ಮಂತ್ರಿಗಳು)--

(ಅ) ಹೌದು--ನೇಕಾರ ಸಹಕಾರಿ ಸಂಘಗಳು ಉತ್ಪಾದಿಸಿದ ಬಟ್ಟೆಯ ಮಾರಾಟದ ಮೇಲೆ ಸೋಡಿ ಹಣವನ್ನು ಕೊಡುವ ವ್ಯವಸ್ಥೆ ಇದೆ.

(ಆ) ೧೯೮೦-೮೧, ೧೯೮೧-೮೨ನೇ ಸಾಲಿಗೆ ಕೊಟ್ಟ ರಿಯಾಯಿತಿಯ (ಸೋಡಿ ಹಣದ) ಮೊತ್ತದ ವಿವರವನ್ನು ಪ್ರತ್ಯೇಕ ಪಟ್ಟಿಯಲ್ಲಿ ಕೊಡಲಾಗಿದೆ. ೧೯೮೨-೮೩ನೇ ಸಾಲಿನ ಸೋಡಿ ಹಣ ಮಂಜೂರಾತಿ ಬಗ್ಗೆ ನಿಯಮಗಳ ರೀತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದ್ದು ಮಂಜೂರಾತಿ ಮಾಡಲಾಗುತ್ತಿದೆ.

(ಇ) ಸದ್ಯಕ್ಕಂತೂ ಇಲ್ಲ

(ಈ) ಸದ್ಯದಲ್ಲಿ ಬೇರೆ ಯಾವ ಯೋಜನೆಯೂ ಇಲ್ಲ.

(ಉ) ಉದ್ಭವಿಸುವುದಿಲ್ಲ.

ಮಂಗಳೂರು ನಗರದಲ್ಲಿ ರಸ್ತೆಗಳು.

೯೧೯ ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ). --ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ

(ಅ) ಮಂಗಳೂರು ನಗರ ಸಭೆಯ ವ್ಯಾಪ್ತಿಗೆ ಬರುವ ರಸ್ತೆಗಳು ಅಭಿವೃದ್ಧಿಗಾಗಿ ಹಿಂದಿನ ಮೂರು ವರ್ಷಗಳಲ್ಲಿ ಖರ್ಚು ಮಾಡಿರುವ ಹಣವೆಷ್ಟು?

(ಆ) ಒಟ್ಟು ಎಷ್ಟು ಕಿಲೋ ಮೀಟರ್ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

(ಇ) ಪ್ರತಿ ಕಿಲೋ ಮೀಟರ್‌ಗೆ ಆಗುವ ವೆಚ್ಚವೆಷ್ಟು

(ಈ) ೧೯೮೩-೮೪ರಲ್ಲಿ ರಸ್ತೆ ದುರಸ್ತಿಗಾಗಿ ಖರ್ಚಿಟ್ಟಿರುವ ಹಣ ಎಷ್ಟು. ಇದರಿಂದ ಎಷ್ಟು ಕಿಲೋಮೀಟರ್ ರಸ್ತೆಯನ್ನು ದುರಸ್ತಿ ಮಾಡಿಸಲಾಗುವುದು.

(ಉ) ಈ ನಗರದ ಅನೇಕ ಪ್ರದೇಶಗಳಲ್ಲಿ ರಸ್ತೆ ಬಹಳ ದುಸ್ಥಿತಿಯಲ್ಲಿರುವುದೆಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ?

(ಊ) ಈ ಸಲುವಾಗಿ ಸರಕಾರದವರು ವಿಶೇಷ ಧನ ಸಹಾಯವನ್ನು ನಗರ ಸಭೆಗೆ ನೀಡುವ ಭರವಸೆ ಕೊಡುವರೇ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).--

(ಅ) ೩೧-೧-೧೯೮೪ ರವರೆಗೆ ರೂ. ೧,೩೧,೫೧,೬೪೭.೦೦.

(ಆ)

೧೯೮೧-೮೨ರ ಸಾಲಿನಲ್ಲಿ	೧೯೮೨-೮೩ರ ಸಾಲಿನಲ್ಲಿ	೧೯೮೩-೮೪ರ ಸಾಲಿನಲ್ಲಿ (ಜನವರಿ ೮೪ ರವರೆಗೆ)
(೧) ೯೮.೪೪ ಕಿಲೋಮೀಟರ್	೧೨೪.೬೦ ಕಿಲೋಮೀಟರ್	೯೨.೮೦ ಕಿಲೋಮೀಟರ್
ಪ್ರತಿ ಕಿಲೋಮೀಟರಿಗೆ ೧೯೮೧-೮೨ರಲ್ಲಿ ರೂ. ೪೯,೧೩೭.೨೪, ೧೯೮೨-೮೩ರಲ್ಲಿ ರೂ. ೪೧,೦೩೨.೮೮ ಮತ್ತು ೧೯೮೩-೮೪ರಲ್ಲಿ ರೂ. ೩೫,೮೪೫.೬೯, ದುರಸ್ತಿ ಮತ್ತು ಅಭಿವೃದ್ಧಿಯೂ ಸೇರಿದಂತೆ.		

(ಇ) ೬೦ ಲಕ್ಷ ರೂಪಾಯಿಗಳು ೧೨೦ ಕಿಲೋಮೀಟರುಗಳು.

(ಉ) ಬಂದಿಲ್ಲ

(ಊ) ಭರವಸೆ ನೀಡಲು ಆಗುವುದಿಲ್ಲ.